ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 87 ಪಬವ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:07.10.2017

## ಅಧಿಸೂಚನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಯ ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ದಿನಾಂಕ:21.03.2014ರ ಅಂತಿಮ ಅಧಿಸೂಚನೆಯನ್ವಯ ಆಯ್ಕೆಯಾದ ಒಟ್ಟು 60 ಅಭ್ಯರ್ಥಿಗಳಿಗೆ ದಿನಾಂಕ:03.04.2017ರ ಅಧಿಸೂಚನೆಯಲ್ಲಿ ಷರತ್ತು ಬದ್ಧ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ಸದರಿ ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆ ಪ್ರಕ್ರಿಯೆಯನ್ನು ಪ್ರಶ್ನಿಸಿ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಲ್ಪಟ್ಟಿದ್ದ, ರಿಟ್ ಅರ್ಜಿ ಸಂಖ್ಯೆ:13617/20177ರಲ್ಲಿ ಮಾನ್ಯ ನ್ಯಾಯಾಲಯವು ದಿ:05.04.2017ರಂದು ಮಧ್ಯಂತರ ಆದೇಶ ನೀಡಿದ್ದು, ಇದಕ್ಕೂ ಪೂರ್ವದಲ್ಲಿ ಒಟ್ಟು 60 ಅಭ್ಯರ್ಥಿಗಳ ಪೈಕಿ, 21 ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಸದರಿ ಅಭ್ಯರ್ಥಿಗಳನ್ನು ಆಡಳಿತ ತರಬೇತಿ ಸಂಸ್ಥೆ ಲಲಿತ್ ಮಹಲ್ ರೋಡ್ ಮೈಸೂರು ಸಂಸ್ಥೆಯು ದಿನಾಂಕ:09.10.2017 ರಿಂದ 10.11.2017ರ ವರೆಗೆ ಏರ್ಪಡಿಸಿರುವ (ವೃತ್ತಿ ತರಬೇತಿಯನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಏರ್ಪಡಿಸಲಾಗುವುದು) 116ನೇ ಸಾಮಾನ್ಯ ಬುನಾದಿ ತರಬೇತಿ ಕಾರ್ಯಕ್ರಮಕ್ಕೆ ಈ ಕೆಳಕಂಡ ಷರತ್ತಿಗೊಳಪಟ್ಟು ನಿಯೋಜಿಸಲಾಗಿದೆ.

1. 21 ಅಭ್ಯರ್ಥಿಗಳಿಗೆ ಸರ್ಕಾರದ ನೇಮಕಾತಿ ಆದೇಶ ದಿನಾಂಕ:03.04.2017ರ ಷರತ್ತು ಮತ್ತು ನಿಬಂಧನೆಗೊಳಪಟ್ಟು ಹಾಗೂ ದಿನಾಂಕ:24.06.2017ರಲ್ಲಿ ಸ್ವಂತ ಕೋರಿಕೆಯಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿಷಯಕ್ಕನುಗುಣವಾಗಿ ತರಬೇತಿಗೆ ನಿಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಸದರಿ ಅಭ್ಯರ್ಥಿಗಳು ನಿಯಮಾನುಸಾರ ಪ್ರಯಾಣ ಭತ್ಯ ಮತ್ತು ದಿನಭತ್ಯ ಪಡೆಯಲು ಅರ್ಹರಿರುವುದಿಲ್ಲ.
2. ಆಡಳಿತ ತರಭೇತಿ ಸಂಸ್ಥೆಯು ಲಲಿತ ಮಹಲ್ ಪ್ಯಾಲೆಸ್ ರಸ್ತೆಯಲ್ಲಿದ್ದು, ಮೈಸೂರಿನ ಮುಖ್ಯ ಬಸ್ ನಿಲ್ದಾಣದಿಂದ 3.5 ಕಿ.ಮೀ. ಹಾಗೂ ರೈಲ್ವೇ ನಿಲ್ದಾಣದಿಂದ 4.5 ಕಿ.ಮೀ ದೂರದಲ್ಲಿದ್ದು, ಎರಡೂ ಕಡೆಯಿಂದ ಪ್ರಿ-ಪೇಡ್ ಆಟೋ ಸೌಲಭ್ಯವಿದೆ.
3. ತರಭೇತಿ ಅವಧಿಯಲ್ಲಿ ವಸತಿ ನಿಲಯದಲ್ಲಿ ವಾಸ್ತವ್ಯ ಕಡ್ಡಾಯವಾಗಿದ್ದು, ಸಾಮಾನ್ಯ ಬುನಾದಿ ತರಭೇತಿಗೆ ಆಗಮಿಸುವ ಎಲ್ಲಾ ಪ್ರಶಿಕ್ಷಣಾರ್ಥಿಗಳು ತರಭೇತಿ ಆರಂಭದ ಹಿಂದಿನ ದಿನ ಸಂಜೆ 7.00 ಗಂಟೆಯೊಳಗೆ 'ಕಪಿಲಾ/ಕಬಿನಿ' ವಸತಿ ನಿಲಯದಲ್ಲಿ ವರದಿ ಮಾಡಿಕೊಳ್ಳಬೇಕು.
4. ಪ್ರತಿ ಕೊಠಡಿಯಲ್ಲಿ ಅಗತ್ಯಕ್ಕನುಸಾರ 2-3 ಪ್ರಶಿಕ್ಷಣಾರ್ಥೀಗಳು ವಾಸ್ತವ್ಯದ ಏರ್ಪಾಡು ಮಾಡಿದೆ. ಈ ಅವಧಿಯಲ್ಲಿ ಪ್ರಶಿಕ್ಷಣಾರ್ಥೀಗಳು, ಭೋಜನ ಗೃಹದಲ್ಲಿ ಕಾಫಿ/ತಿಂಡಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರಶಿಕ್ಷಣಾರ್ಥೀಗಳು ವಾಸ್ತವ್ಯದ ಅವಧಿಯಲ್ಲಿ ವಸತಿ ನಿಲಯದ ಎಲ್ಲಾ ನಿಯಮಗಳಿಗೆ ಬದ್ಧವಾಗಿರಬೇಕು.

5. ಯಾವುದೇ ಕಾರಣಕ್ಕೂ ಪ್ರಶಿಕ್ಷಣಾರ್ಥಿಗಳ ಪತಿ/ಪತ್ನಿ ಇವರಿಗೆ ವಾಸ್ತವ್ಯಕ್ಕೆ ಅವಕಾಶವಿಲ್ಲ. ಅದೇ ರೀತಿ ಅತಿಥಿಗಳಿಗೂ ಕೂಡ ಅವಕಾಶವಿರುವುದಿಲ್ಲ.
6. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇದೆ ಆವರಣದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರ ಒಂದು ಶಾಖೆ ಮತ್ತು ಎ.ಟಿ.ಎಂ. ಸೌಲಭ್ಯವನ್ನು ಒಳಗೊಂಡಿರುತ್ತದೆ ಪ್ರಶಿಕ್ಷಣಾರ್ಥಿಗಳ ಕಛೇರಿಯಿಂದ ವೇತನ ಪಡೆಯಲು ಸ್ವಂತ ಏರ್ಪಾಡು ಮಾಡಿಕೊಳ್ಳಬೇಕು. ಈ ಉದ್ದೇಶಕ್ಕಾಗಿ ಪ್ರಯಾಣ ಕೈಗೊಳ್ಳಲು ತರಬೇತಿ ಅವಧಿಯಲ್ಲಿ ಅವಕಾಶವಿಲ್ಲ. ಡಿ.ಡಿ. ಮತ್ತು ಚೆಕ್‌ಗಳನ್ನು ಮಹಾ ನಿರ್ದೇಶಕರ ಹೆಸರಿನಲ್ಲಾಗಲಿ/ಆಡಳಿತ ತರಬೇತಿ ಸಂಸ್ಥೆಯ ಹೆಸರಿನಲ್ಲಾಗಲಿ ಸ್ವೀಕರಿಸಲಾಗುವುದಿಲ್ಲ.
7. ಗರ್ಭಿಣಿಯರು / ಹಾಲುಣಿಸುವ ತಾಯಂದಿರು / ವಿವಾಹ – ಇತ್ಯಾದಿ ಸಮಸ್ಯೆ ಇರುವವರು ವೈದ್ಯಕೀಯ ದೃಢೀಕರಣ ಪತ್ರದೊಂದಿಗೆ ತರಬೇತಿಗೆ ಹಾಜರಾಗಬಹುದು. ಪೂರ್ವಾನುಮತಿ ಕಡ್ಡಾಯ.
8. ಮುಂಜಾನೆ ದೈಹಿಕ ಶಿಕ್ಷಣ ತರಬೇತಿ ಕಡ್ಡಾಯವಾಗಿರುತ್ತದೆ. ಸಂಜೆ, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಚಟುವಟಿಕೆಗಳಾದ ಜಿಮ್, ಟೇಬಲ್ ಟೆನಿಸ್, ಬಾಲ್ ಬ್ಯಾಡ್ಮಿಂಟನ್ ಆಡಲು ವ್ಯವಸ್ಥೆ ಇದ್ದು, ಪ್ರಶಿಕ್ಷಣಾರ್ಥಿಗಳು ಅದರ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.
9. ತರಬೇತಿ ಚಟುವಟಿಕೆಗಳಾಗಿ, ಆಡಳಿತ ತರಬೇತಿ ಸಂಸ್ಥೆಯಲ್ಲಿ ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಇದ್ದು, ಇಂಟರ್‌ನೆಟ್ ಮತ್ತು ವೈ–ಫೈ ಸೌಲಭ್ಯಗಳಿದ್ದು ಅವುಗಳನ್ನು ತರಬೇತಿ ಅವಧಿಯಲ್ಲಿ ಬಳಸಬಹುದಾಗಿದೆ.
10. ಆಡಳಿತ ತರಬೇತಿ ಸಂಸ್ಥೆಯ ಆವರಣದಲ್ಲಿ ವಾಚನಾಲಯವಿದ್ದು, ಬೆಳಿಗ್ಗೆ 8.00 ಗಂಟೆಯಿಂದ ರಾತ್ರಿ 8.30 ಗಂಟೆಯವರೆಗೆ ಪ್ರಶಿಕ್ಷಣಾರ್ಥಿಗಳಿಗೆ ತೆರೆದಿರುತ್ತದೆ.
11. ತರಬೇತಿ ಅವಧಿಯಲ್ಲಿ ಮಹಾ ನಿರ್ದೇಶಕರಿಂದ ವಹಿಸಲಾಗುವ ಯೋಜನಾ ವರದಿ, ಕ್ಷೇತ್ರ ಭೇಟಿ ವರದಿ, ಪುಸ್ತಕ ವಿಮರ್ಶೆ ಸಿದ್ಧಪಡಿಸಿ ನಿಗದಿತ ದಿನಾಂಕಗಳಂದು ಸಲ್ಲಿಸಬೇಕಾಗಿರುತ್ತದೆ.
12. ವಾಸ್ತವ್ಯದ ಅವಧಿಯಲ್ಲಿ ತುರ್ತು ಆರೋಗ್ಯದ ನೆರವಿಗಾಗಿ ಆರೋಗ್ಯ ಇಲಾಖೆಯ ಪ್ರಾಥಮಿಕ ಆರೋಗ್ಯ ಘಟಕವು ಆಡಳಿತ ತರಬೇತಿ ಸಂಸ್ಥೆಯು ಆವರಣದಲ್ಲಿದ್ದು, ಅಲ್ಲಿನ ವೈದ್ಯರ ಮಾರ್ಗದರ್ಶನ ಪಡೆಯಬಹುದು. ಶುಶ್ರೂಶೆಯಲ್ಲಿರುವವರು ತಮ್ಮ ಅಗತ್ಯದ ಔಷಧ/ಮಾತ್ರೆಗಳನ್ನು ಹೊಂದಿರಬೇಕು.
13. ತೀರಾ ಅನಿವಾರ್ಯ ಕಾರಣಗಳ ಹೊರತುಪಡಿಸಿ ತರಬೇತಿ ಅವಧಿಯಲ್ಲಿ 2 ದಿವಸಗಳಿಗಿಂತ ಹೆಚ್ಚು ಸಾಂದರ್ಭಿಕ ರಜೆ ಪಡೆಯುವಂತಿಲ್ಲ. ತರಬೇತಿ ನಿರ್ದೇಶಕರಿಂದ ಅನುಮತಿ ಪಡೆಯದೇ ರಜೆಯ ಮೇಲೆ ತೆರಳುವಂತಿಲ್ಲ/ಆವರಣ ಬಿಡುವಂತಿಲ್ಲ.
14. ಇಡೀ ತರಬೇತಿಯ ಅವಧಿಯಲ್ಲಿ ಸಂಸ್ಥೆಯ ಶಿಷ್ಟಾಚಾರ, ಸಮಯ ಪಾಲನೆ ಹಾಗೂ ವಸತಿ ನಿಲಯದ ಶಿಸ್ತು ನಡವಳಿಗಳಿಗೆ ಬದ್ಧರಾಗಿರಬೇಕು.
15. ತರಬೇತಿ ಅವಧಿಯಲ್ಲಿ ಶಿಷ್ಟಾಚಾರವನ್ನು ಉಲ್ಲಂಘಿಸಿದ ಪ್ರಶಿಕ್ಷಣಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

16. ತರಭೇತಿಯ ಅವಧಿಯಲ್ಲಿ ಪ್ರಶಿಕ್ಷಾರ್ಥಿಗಳು ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಮುನ್ನೆಚ್ಚರಿಕೆ ವಹಿಸಲು ಕೋರಿದೆ.
17. ವಸತಿ ನಿಲಯದಲ್ಲಿ ಹಾಗೂ ಸಂಸ್ಥೆಯ ಆವರಣದಲ್ಲಿ ದೂಮಪಾನ ಹಾಗೂ ಮಧ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
18. ತರಬೇತಿಯ ಸಮಯದಲ್ಲಿ ಪ್ರಶಿಕ್ಷಣಾರ್ಥಿಗಳು ತಮ್ಮ ಸೆಲ್ ಫೋನ್ ಬಳಸುವಂತಿಲ್ಲ, ತುರ್ತು ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳ ಕುಟುಂಬ ವರ್ಗದವರು ಕಛೇರಿಯ ಈ ದೂರವಾಣಿ ಸಂಖ್ಯೆ:0821-223264/223839ಗೆ ಕರೆ ಮಾಡಬಹುದಾಗಿರುತ್ತದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು**
**ಅವರ ಹೆಸರಿನಲ್ಲಿ**

(ಡಿ.ಎಸ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್ಎ)/ (ಇ&ಆರ್‌ಎಸ್ಎ)/(ಎ&ಇ) ರವರ ಕಾರ್ಯದರ್ಶಿ ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-56000
2. ಮಹಾನಿರ್ದೇಶಕರು, ಆಢಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
3. ಮುಖ್ಯಸ್ಥರು, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ, ಲಲಿತ್‌ಮಹಲ್ ರಸ್ತೆ, ಮೈಸೂರು. ಮೈಸೂರು ಜಿಲ್ಲೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ;**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

# ಅನುಬಂಧ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ 21 ಕಾರ್ಯನಿರ್ವಾಹಕ ಅಧಿಕಾರಿಗಳ ವಿವರ

| ಕ್ರ.ಸಂ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ |
|---|---|
| • | ಸುಷ್ಮಾ ಕೆ.<br>ಮನ್ನಿಗೇರಿ, ಬಿದರಹಳ್ಳಿ ಪೋಸ್ಟ್, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ-571422 |
| • | ಅವಿನಾಶ್ ಸಿ.<br>#11, ಶ್ರೀನಿಧಿ ನಿಲಯ, 2ನೇ ಕ್ರಾಸ್, 3ನೇ ಮುಖ್ಯ, ಕಲ್ಯಾಣ ನಗರ , ನಾಗರಭಾವಿ, 1ನೇ ಹಂತ, ಬೆಂಗಳೂರು-560071 |
| • | ರಮೇಶ್ ಜಿ.ವಿ,<br>#439/ಎ, 1ನೇ ಮಹಡಿ, 2ನೇ ಮುಖ್ಯ 2ನೇ ಕ್ರಾಸ್, ಮತ್ತೀಕರೆ, ಬೆಂಗಳೂರು-560054.<br>(ಪ್ರಸ್ತುತ ಬಿನ್ ವೆಂಕಟರಮಣರೆಡ್ಡಿ, ಮುಲ್ಲಂಗಿ ಚಟ್ಲಪಲ್ಲಿ, ವಿಲೇಜ್, ತಿಮ್ಮಮಪಲ್ಲಿ ಪೋಸ್ಟ್, ಗುಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ). |
| • | ಅಭಿಷೇಕ್ ಹೆಗಡೆ,<br>#389/ಹೆಚ್., 9ನೇ 'ಎಫ್' ಮುಖ್ಯರಸ್ತೆ, ವಿಜಯನಗರ, ಬೆಂಗಳೂರ-560040 |
| • | ಮಂಜುನಾಥ ಹರ್ತಿ,<br>ಡಿ.ಆರ್.ಡಿ.ಎಲ್. ಸಾವಿತ್ರಮ್ಮ, ಪ್ರಾಧ್ಯಾಪಕರು, ಮತ್ತು ಮುಖ್ಯೋಪಾಧ್ಯಯರು ಜಿನೇಟಿಕ್ಸ್ ಮತ್ತು ಪ್ಲಾಂಟ್ ಬ್ರೀಡಿಂಗ್, ಯು.ಎ.ಎಸ್, ಜಿಕೆವಿಕೆ ಬೆಂಗಳೂರು-560065.<br>(ಪ್ರಸ್ತುತ ತಂದೆ: ಸಹದೇವಪ್ಪ ಹರ್ತಿ, ಮು.ಪೋ. ಯಲವಗಿ ಗ್ರಾಮ ಸವಣೂರು ತಾಲ್ಲೂಕು ಹಾವೇರಿ ಜಿಲ್ಲೆ-581118) |
| • | ಹರ್ಷಕುಮಾರ್ ಕೆ.<br>ನಂ.ಎಂ.ಐ.ಜಿ 79/9, 6ನೇ ಕ್ರಾಸ್, 2ನೇ ಹಂತ, ಕೆಹೆಚ್.ಬಿ.ಕಾಲೋನಿ, ಬಸವೇಶ್ವರ ನಗರ ಬೆಂಗಳೂರು-560079 |
| • | ರಾಜಕುಮಾರ್,<br>C/o ಮಹೇಶ್ ಕರೂರ,<br>ಶಾಮನ್ನ ಬಿಲ್ಡಿಂಗ್,<br>#282/4, 3ನೇ ಕ್ರಾಂಸ್ 7ನೇ ಮುಖ್ಯ, ಪೀಣ್ಯ 1ನೇ ಹಂತ, ಬೆಂಗಳೂರು-560058 |
| • | ಸಂತೋಷ್ ಬಿರಾದಾರಪಾಟೀಲ,<br>#48/3, 8ನೇ ಮುಖ್ಯ, 13ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-56003 |
| • | ನಂದಿನಿ ಪಾಟೀಲ್,<br>ಶಾಂತಿ ಎಕ್ಸ್‌ಟೆನ್ಷನ್ ಏರಿಯಾ, ಬಾಗಲಕೋಟ-587101 |
| • | ನವೀನ ಪ್ರಸಾದ್ ಬಿ ಕಟ್ಟಿಮನಿ,<br>ಬಸವಶ್ರೀ ನಿಲಯ, ಭಕ್ತಿಭಂಡಾರ ಹೈಸ್ಕೂಲ್ ಎದುರು, ಉದಯ ನಗರ, ಹಾವೇರಿ-581110 |
| • | ಶೈಲಾ ಎನ್.<br>ಸರ್ಕಾರಿ ಪಿ.ಯು.ಕಾಲೇಜ್,<br>ಐ.ಡಿ.ಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ-572132<br>(ಪ್ರಸ್ತುತ ನಂ.21, 20ನೇ ಕ್ರಾಸ್, ಕಬ್ಬನ್‌ಪೇಟೆ, ಬೆಂಗಳೂರು-560002) |

| | |
|---|---|
| • | ಗೀತಾ ಶಂಕರ್ ಎಸ್.<br>#29/ಎ, 4ನೇ ಕ್ರಾಸ್, 2ನೇ ಮುಖ್ಯ ಬಾಪೋಜಿ ನಗರ, ಮೈಸೂರು ರೋಡ್, ಬೆಂಗಳೂರು-560026 |
| • | ನಿಂಗಪ್ಪ ಎಸ್.ಮಸಳಿ,<br>ನಾಗಠಾಣ ಪೋಸ್ಟ್, ಬಿಜಾಪೂರ ತಾಲ್ಲೂಕು, ಬಿಜಾಪೂರ ಜಿಲ್ಲೆ-586112 |
| • | ಭಾಗ್ಯಶ್ರೀ ಜಾಗೀರದಾರ್,<br>ಶ್ರೀ ಚನ್ನಕೇಶವ, ಮೋರೆ ಪ್ಲಾಟ್, ಪ್ಲಾಟ್ ನಂ.5/1ಮಿಚಿಗನ ಕಂಪೌಂಡ್, ಸಪ್ತಾಪುರ, ಧಾರವಾಡ-580007 |
| • | ಸುಮೀತಾ ಬಿ. ಚಿಮ್ಮನಕಟ್ಟಿ,<br>ತಂದೆ ಬಿ.ಬಿ.ಚಿಮ್ಮನಕಟ್ಟಿ,<br>ಚಾಲುಕ್ಯನಗರ ಬಾದಾಮಿ, ಬಾಗಲಕೋಟ ಜಿಲ್ಲೆ-587201 |
| • | ಹೊನ್ನಯ್ಯ ಜಿ.ಕೆ,<br>ಮು.ಕಾಂ.ಪೋಸ್ಟ್ ಹೆಗ್ಗೆರೆ, ಶ್ರೀರಾಂಪುರ ಹೋಬಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ-577542 |
| • | ನಾರಾಯಣ ಎಸ್.<br>ನಂ.207, 10ನೇ ಕ್ರಾಸ್, 1ನೇ ಹಂತ, 5ನೇ ಮುಖ್ಯ ರಸ್ತೆ, ಬಸವೇಶ್ವರನಗರ, ಬೆಂಗಳೂರು-560079.<br>(ಪ್ರಸ್ತುತ ನಂ.3 ಮನೋಜವಂ ಪಿಹೆಚ್.01, 6ನೇ ಡಿ ಕ್ರಾಸ್ ಕಗ್ಗದಾಸಪುರ, ಸಿ.ವಿ.ರಾಮನ್ ನಗರ ಅಂಚೆ, ಬೆಂಗಳೂರು-93) |
| • | ಬಿಂದು ಜಿ.<br>ನಂ.88, ಸೋಲದೇವನಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು-560090 |
| • | ಹೇಮಾವತಿ ಆರ್.<br>#17/2 ನಂ.008, ಎಸ್.ಎಲ್.ವಿ. ಎನ್‌ಕ್ಲೇವ್, ಅಶ್ವಥ ನಗರ ಥಣೀಸಂದ್ರ, ಬೆಂಗಳೂರು-560045 |
| • | ಮಮತಾ ಎಲ್,<br>ನಂ.17, ನೆಲಮಹಡಿ, 6ನೇ ಕ್ರಾಸ್, 7ನೇ ಮುಖ್ಯರಸ್ತೆ, ಶ್ರೀರಾಂಪುರ ಪೋಸ್ಟ್ ಬೆಂಗಳೂರು-560021. (ಪ್ರಸ್ತುತ ನಂ.22, 2ನೇ ಕ್ರಾಸ್, 7ನೇ ಮುಖ್ಯ, ನೆಲಮಹಡಿ, ಶ್ರೀರಾಂಪುರ, ಬೆಂಗಳೂರು-560021) |
| • | ಅಪೂರ್ವ ಸಿ. ಅನಂತರಾಮು,<br>#84/ಎ, 1ನೇ ಮುಖ್ಯ, 10ನೇ ಎ ಕ್ರಾಸ್, ಮಹಾಲಕ್ಷ್ಮೀಪುರಂ 2ನೇ ಹಂತ, ಬೆಂಗಳೂರು-560086 |

27/10/17

(ಡಿ.ಎಸ್.ವಿಜಯ್)

ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ